ವೈದ್ಯರು ಮತ್ತು ಸಿಬ್ಬಂದಿ ಕೊರತೆ

70(1193); ಶ್ರೀ ಕ್ಯಾತಸಂದ್ರ ಎನ್. ರಾಜಣ್ಣ (ಮಧುಗಿರಿ)

ಅ) ಮಧುಗಿರಿ ಕ್ಷೇತ್ರದ ಆಸ್ಪತ್ರೆಗಳಲ್ಲಿ ವೈದ್ಯರು ಮತ್ತು ಇತರೆ ಉಪ ಕೇಂದ್ರಗಳಲ್ಲಿ ಸಿಬ್ಬಂದಿ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಆಂಧ್ರ ಗಡಿ ಭಾಗದ ಮಿಡಿಗೇಶಿ ಆಸ್ಪತ್ರೆ ಬಗ್ಗೆ ಇರುವ ಅನಾನುಕೂಲಗಳನ್ನು ಸರಿಪಡಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು (ವಿವರ ನೀಡುವುದು);

ಇ) ಉಪ ಕೇಂದ್ರಗಳ ಸಮರ್ಪಕ ನಿರ್ವಹಣೆ ಮಾಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ (ವಿವರ ನೀಡುವುದು)?

ಶ್ರೀ ಯು.ಟಿ. ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಬಂದಿದೆ.

ಆ) ಪ್ರಾಥಮಿಕ ಆರೋಗ್ಯ ಕೇಂದ್ರ ಮಿಡಿಗೇಶಿ ಇಲ್ಲಿ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಹುದ್ದೆ ಖಾಲಿ ಇದ್ದು, ಈ ಹುದ್ದೆಗೆ ಎನ್.ಆರ್.ಹೆಚ್.ಎಂ. ಅಡಿ ಆಯುಷ್ ವೈದ್ಯರನ್ನು ಗುತ್ತಿಗೆ ಆಧಾರದ ಮೇಲೆ ಕ್ಲಿನಿಕಲ್ ಸೇವೆಗೆ ನೇಮಿಸಲಾಗಿದೆ.

ಇ) ಮಧುಗಿರಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಗೆ 7 ಉಪ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, ಇವುಗಳಲ್ಲಿ 6 ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರು ಕಾರ್ಯನಿರ್ವಹಿಸುತ್ತಿದ್ದಾರೆ. ಒಂದು ಹುದ್ದೆ ಖಾಲಿ ಇರುತ್ತದೆ. 7 ಉಪಕೇಂದ್ರಗಳಲ್ಲಿ 5 ಉಪಕೇಂದ್ರಗಳಿಗೆ ಕಟ್ಟಡ ಲಭ್ಯತೆ ಇದ್ದು 2 ಉಪಕೇಂದ್ರಗಳಿಗೆ ಕಟ್ಟಡ ನಿರ್ಮಾಣಕ್ಕೆ ನಿವೇಶನ ಲಭ್ಯತೆ ಇರುವುದಿಲ್ಲ. ನಿವೇಶನ ಲಭ್ಯತೆ ಆಧರಿಸಿ ಉಪಕೇಂದ್ರಗಳ ಕಟ್ಟಡ ನಿರ್ಮಾಣಕ್ಕೆ ಕ್ರಮ ವಹಿಸಲಾಗುವುದು.

ಶ್ರೀ ಕೆ.ಎನ್. ರಾಜಣ್ಣ: ಉತ್ತರ ಬಂದಿದೆ. 25 bed ನ hospital ಗಡಿಭಾಗದಲ್ಲಿದೆ, ತಾವು ಕೂಡ ಅದನ್ನು ನೋಡಿರುತ್ತೀರಿ ಎಂದು ಅಂದುಕೊಂಡಿದ್ದೇನೆ. ಆಂಧ್ರ ಗಡಿ ಭಾಗದಲ್ಲಿರತಕ್ಕಂಥ ಮಿಡಗೇಶಿ ಆಸ್ಪತ್ರೆ ಅದು ಹೋಬಳಿ ಕೇಂದ್ರ. ಅಲ್ಲಿಗೆ ಇವರು ಯಾರನ್ನು ಹಾಕಿದ್ದಾರೆಂದರೆ, ಆಯುಷ್ ವೈದ್ಯರನ್ನು ಹಾಕಿದ್ದೇವೆಂದು ಹೇಳುತ್ತಾರೆ. ದೂರದಲ್ಲಿರತಕ್ಕಂಥ ಗಡಿ ಭಾಗದಲ್ಲಿರತಕ್ಕಂಥ ಮಹತ್ವವಾದಂಥ ಆಸ್ಪತ್ರೆಯಲ್ಲಿ ಆಯುಷ್ ಡಾಕ್ಟರ್‌ರವರನ್ನು ನೇಮಕ ಮಾಡಿ ಹಾಕಿದ್ದಾರೆಂದರೆ, ಆ ಭಾಗದ ಜನರಿಗೆ ಎಷ್ಟು ಅನಾನುಕೂಲವಾಗುತ್ತದೆ. ಅದನ್ನು ತಪ್ಪಿಸಿ ಇವರು ಯಾರನ್ನಾದರೂ qualified Doctor ರವರನ್ನು ಅಲ್ಲಿಗೆ ಹಾಕಬೇಕೆಂದು ನನ್ನ ಸಲಹೆ. ಇದರ ಜೊತೆಗೆ ಅವರ ಉತ್ತರದಲ್ಲಿ ಕೆಲವು ಉಪ ಕೇಂದ್ರಗಳಿಗೆ ಕಟ್ಟಡ ಇಲ್ಲವೆಂದು ಹೇಳಿದ್ದಾರೆ. ಕಟ್ಟಡಗಳನ್ನು ಕಟ್ಟಲಿಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತಾರೆನ್ನುವ ಮಾಹಿತಿಯನ್ನು ಹೇಳಬೇಕು.

ಶ್ರೀ ಯು.ಟಿ. ಖಾದರ್: ಮಧುಗಿರಿ ವಿಧಾನ ಸಭಾ ಕ್ಷೇತ್ರದಲ್ಲಿ 1 ಸಾರ್ವಜನಿಕ ಆಸ್ಪತ್ರೆಯಲ್ಲಿ 9 ತಜ್ಞ ವೈದ್ಯರಲ್ಲಿ 8 ಜನ ವೈದರು ಇವತ್ತು ಕೆಲಸ ನಿರ್ವಹಿಸುತ್ತಿದ್ದಾರೆ. ಅದೇ ರೀತಿಯಾಗಿ ಮಧುಗಿರಿ ಕ್ಷೇತ್ರದಲ್ಲಿ ಒಟ್ಟು 13 ಪ್ರಾಥಮಿಕ ಆರೋಗ್ಯ ಕೇಂದ್ರಗಳ ಪೈಕಿ 11 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ doctor ಗಳಿದ್ದಾರೆ. 2 ವೈದ್ಯರ ಹುದ್ದೆ ಖಾಲಿಯಿದ್ದು, 13 ರಲ್ಲಿ 2 ಮಾತ್ರ ಖಾಲಿ ಇದೆ. ಅವರು ಕೇಳಿರುವ ಮಿಡಗೇಶಿಯಲ್ಲಿ MBBS doctor ರವರು ಸಿಕ್ಕಿಲ್ಲವೆಂದು NRHM ಅಡಿಯಲ್ಲಿ ಆರ್ಯುವೇದಿಕ್ doctor ರವರನ್ನು ನಿಯೋಜಿಸಲಾಗಿದೆ. ನಾವು ಈಗಾಗಲೇ ಜಿಲ್ಲಾಧಿಕಾರಿಗಳಿಗೆ ಮತ್ತು DHO ಗಳಿಗೆ ಅಧಿಕಾರ ಕೊಟ್ಟಿದ್ದು, MBBSನವರು ಯಾರಾದರೂ walk-in interview ನಲ್ಲಿ ಬಂದರೆ ತಕ್ಷಣವೇ ತೆಗೆದುಕೊಳ್ಳುವಂಥ ಅವಕಾಶವಿದೆ.

ಶ್ರೀ ಕೆ.ಎನ್. ರಾಜಣ್ಣ: ನನ್ನ ಪ್ರಶ್ನೆ ನಿರ್ದಿಷ್ಟವಾಗಿದೆ. ಮಿಡಗೇಶಿಗೆ doctor ರವರನ್ನು ಹಾಕುತ್ತಿರೋ ಇಲ್ಲವೋ ಹೇಳಿ. ಬೇರೆ ಕಡೆಗೆ ಹಾಕಿರುವುದು, ಬಿಟ್ಟಿರುವುದು, ಅದನ್ನು ನಾನು ಕೇಳುತ್ತಿಲ್ಲ. ನನಗೆ ಅದರ ಅವಶ್ಯಕತೆ ಇಲ್ಲ.

ಶ್ರೀ ಯು.ಟಿ. ಖಾದರ್: ಮಿಡಗೇಶಿ ಆಸ್ಪತ್ರೆಗೆ MBBS doctor ರವರನ್ನು ಹಾಕಲಿಕ್ಕೆ ನಾವು ಈಗಲೂ ತಯಾರಿದ್ದೇವೆ. MBBS doctor ರವರನ್ನು ನೇಮಿಸಿಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಮತ್ತು DHO ಗಳಿಗೆ ಸಂಪೂರ್ಣ ಅಧಿಕಾರ ಕೊಟ್ಟಿದ್ದೇವೆ. MBBS ಆದವರು ಯಾರಾದರೂ ಸರ್ಕಾರಿ ಕೆಲಸಕ್ಕೆ ಬಂದರೆ ತಕ್ಷಣ ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳುವುದಕ್ಕೆ ಅವಕಾಶವಿದೆ.

ಶ್ರೀ ಕೆ.ಎನ್. ರಾಜಣ್ಣ: ನಾನು ಮಲೆಬೆನ್ನೂರಿನಲ್ಲಿರುವ ಒಬ್ಬ MBBS doctor ರವರು ಇದ್ದಾರೆ ಅಲ್ಲಿಗೆ ಬರುತ್ತೇನೆ ಎನ್ನುವ consent ಕೂಡ ಕೊಟ್ಟಿದ್ದಾರೆ. ಅವರನ್ನು ಅಲ್ಲಿಗೆ postings ಮಾಡಿ ಎಂದು ಹೇಳಿದರೆ, ಇವರು ಈಗ ಅವರನ್ನು ವರ್ಗಾವಣೆ ಮಾಡುವುದಕ್ಕೆ ಆಗುವುದಿಲ್ಲವೆಂದು ಅದನ್ನು ಖಾಲಿ ಇಟ್ಟಿದ್ದಾರೆ. ಅದಕೋಸ್ಕರ ಆ doctor ರವರನ್ನು ಹಾಕಲಿಕ್ಕೆ ಏನು ತೊಂದರೆ ಇದೆ ಹೇಳಿ.

ಶ್ರೀ ಯು.ಟಿ. ಖಾದರ್: ಮಾನ್ಯ ರಾಜಣ್ಣನವರಿಗೆ ಈಗ Council ನಿಂದ ವರ್ಗ ಮಾಡುವ ವಿಚಾರ ಬಹಳ ಚೆನ್ನಾಗಿ ಗೊತ್ತಿದೆ. ಇನ್ನೊಂದು ಕಡೆಯಿಂದ ವರ್ಗ ಮಾಡಲಿಕ್ಕೆ ಅವರು ಕೇಳಿಕೊಂಡಿದ್ದಾರೆ. ನಮ್ಮ ಕಾನೂನು ಪ್ರಕಾರ ಅಲ್ಲಿಂದ ಇಲ್ಲಿಗೆ ವರ್ಗ ಮಾಡಿದರೆ ಇಲ್ಲಿಗೆ doctor ಬರುತ್ತಾರೆ ಆದರೆ ಅಲ್ಲಿ ಖಾಲಿಯಾಗುತ್ತದೆ.

ಅಧ್ಯಕ್ಷರು: ಅಲ್ಲಿ ಜನ ಗಲಾಟೆ ಮಾಡುತ್ತಾರೆ, ಬೇಗ ಇದಕ್ಕೊಂದು ಪರಿಹಾರ ಕಂಡು ಹಿಡಿಯಿರಿ.

ಶ್ರೀ ಕೆ.ಎನ್. ರಾಜಣ್ಣ: ಅಲ್ಲಿಗೆ ಯಾರಿಗೆ ಬೇಕಾದರೂ ಹಾಕಲಿ ನನ್ನ ಅಭ್ಯಂತರವಿಲ್ಲ. ಯಾರಾದರೊಬ್ಬ doctor ರವರನ್ನು ಹಾಕಿಸಿ.

ಅಧ್ಯಕ್ಷರು: ಯಾರಾದರೊಬ್ಬ doctor ರವರನ್ನು ಹಾಕಿಸಿ.

ಶ್ರೀ ಕೆ.ಎನ್. ರಾಜಣ್ಣ: ನಾನು ಶಾಸಕನಾದ ಮೊದಲ ದಿನದಿಂದಲೂ ಅಲ್ಲಿಗೆ doctor ರವರನ್ನು ಹಾಕಿ ಎಂದು ಪತ್ರ ಕೊಡುತ್ತಿದ್ದೇನೆ ಇಲ್ಲಿಯವರೆಗೂ ಹಾಕಿಲ್ಲ.

ಶ್ರೀ ಯು.ಟಿ. ಖಾದರ್: ಪ್ರಥಮ ಆದ್ಯತೆಯಲ್ಲಿ ಅದನ್ನು ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು: ಓಕೆ. ಜಾಧವ್‌ರವರು ಇದ್ದಾರೆಯೆ?

ಶ್ರೀ ಜೆ.ಆರ್. ಲೋಬೋ: ನನ್ನದೊಂದು ಪ್ರಶ್ನೆ ಬಾಕಿ ಇದೆ.

ಅಧ್ಯಕ್ಷರು: ನಾನು ಆಗಲೇ ಕರೆದೆ. ಆಯಿತು, ನೀವು ಕೇಳಿ.

ಆಸ್ಪತ್ರೆಯಲ್ಲಿ ನರ್ಸ್‌ಗಳ ಕೊರತೆ

71(937); ಶ್ರೀ ಲೋಬೋ ಜೆ.ಆರ್. (ಮಂಗಳೂರು ನಗರ ದಕ್ಷಿಣ)

ಅ) ಮಂಗಳೂರು ಸರಕಾರಿ ವೆನ್‌ಲಾಕ್ ಆಸ್ಪತ್ರೆಯಲ್ಲಿ ಹಾಗೂ ಲೇಡಿಗೋಶನ್ ಆಸ್ಪತ್ರೆಯಲ್ಲಿ ಮಂಜೂರಾದ ನರ್ಸ್ ಹುದ್ದೆಗಳೆಷ್ಟು; ಭರ್ತಿಯಾದ ಹಾಗೂ ಖಾಲಿಯಿರುವ ಹುದ್ದೆಗಳೆಷ್ಟು;

ಆ) ಆಸ್ಪತ್ರೆಯಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿರುವ ನರ್ಸ್‌ಗಳ ಹುದ್ದೆಗಳು ಎಷ್ಟು;

ಇ) ಕಸ್ತೂರ್ಬಾ ಮೆಡಿಕಲ್ ಕಾಲೇಜಿಗೆ ಮಂಜೂರಾಗಿರುವ ನರ್ಸ್‌ಗಳ ಸಂಖ್ಯೆ ಎಷ್ಟು;

ಈ) ಆಸ್ಪತ್ರೆಗಳಲ್ಲಿ ರೋಗಿಗಳ ಸಂಖ್ಯೆಗೆ ಅನುಗುಣವಾಗಿ ಸಾಕಷ್ಟು ನರ್ಸ್‌ಗಳು ಕೆಲಸ ನಿರ್ವಹಿಸುತ್ತಿದ್ದಾರೆಯೇ; ಕೊರತೆ ಇರುವ ನರ್ಸ್‌ಗಳ ಸಂಖ್ಯೆ ಎಷ್ಟು;

ಉ) ಆಸ್ಪತ್ರೆಯಲ್ಲಿ ನರ್ಸ್‌ಗಳ ವಾಸ್ತವ್ಯಕ್ಕಾಗಿ ಕೈಗೊಂಡ ಕ್ರಮಗಳೇನು?

ಶ್ರೀ ಯು.ಟಿ. ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಮಂಗಳೂರು ಸರಕಾರಿ ವೆನ್‌ಲಾಕ್ ಆಸ್ಪತ್ರೆಯಲ್ಲಿ 188 ಶುಶ್ರೂಷಕರ ಹುದ್ದೆ ಮಂಜೂರಾಗಿದ್ದು, ಈ ಪೈಕಿ 130 ಶುಶ್ರೂಷಕರು ಕರ್ತವ್ಯ ನಿರ್ವಹಿಸುತ್ತಿದ್ದು, 58 ಶುಶ್ರೂಷಕರ ಹುದ್ದೆಗಳು ಖಾಲಿ ಇವೆ.